ಆ) ಉಲ್ಲಾಳು ಸರ್ವೆ ನಂ. 199ರಲ್ಲಿ 1975ರಲ್ಲಿ ಹಂಚಿಕೆ ಮಾಡಲಾಗಿದ್ದ ನಿವೇಶನ ರದ್ದತಿಯ ಬಗ್ಗೆ ಮಾನಯ ಉಚ್ಚ ನ್ಯಾಯಾಲಯದಲಲಿ ರಿಟ್ ಆರ್ಜಿ ಸಂಖ್ಯೆ : 18218:87 ದಾಖಿಲಾಗಿದೆ ಮತ್ತು ಸ.ನಂ. 199 ರ ಜಮೀನಿನ ಮಾಲೀಕತ್ವ ದ ಬಗ್ಗೆ ಸಹಾ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ. 1720 ರ 88 ದಾಖಿಲಾಗಿದೆ. ಈ ಎರಡೂ ರಿಟ್ ಅರ್ಜಿಗಳನ್ನು ಒಟ್ಟುಗೂಡಿಸಿಕೊಂಡು ಉಚ್ಚ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ವಿಚಾರಣಾ ನಂತರ ಮಾನ್ಯ ನ್ಯಾಯಾಲಯದ ಆದೇಶಕ್ಕೆ ಒಳಪಟ್ಟು ಕಾನೂನು ಪ್ರಕಾರ ಅರ್ಹರಿಗೆ ಹಕ್ಕು ಪತ್ರ ಕೊಡಲು ಕ್ರಮ ತೆಗೆದುಕೊಳ್ಳಲಾಗಿದೆ.

ಇ) ಉಲ್ಲಾಳು ಸರ್ವೆ ನಂ. 199ರಲ್ಲಿ ಒಟ್ಟು 1457 ಕುಟುಂಬಗಳು ಮನೆಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದಾರೆ.

ಯಶವಂತ ಪುರ ಹೋಬಳಿ ಉಲ್ಲಾಳು ಉಪನಗರದ ಸರ್ವೆನಂ. 199ರಲ್ಲಿ ಸ್ಮಶಾನಕ್ಕೆ ಜಾಗ ಮಂಜೂರು ಮಾಡುವುದರ ಬಗ್ಗೆ

865 (1007) ಶ್ರೀ ಆರ್. ಅಶೋಕ್ .ಕೆ. (ಉತ್ತರ ಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ತಾಲ್ಲೂಕು ಉಪನಗರದ ಸರ್ವೆ ನಂ: 199ರಲಲ್ಲಿ ಸ್ಮಶಾನಕ್ಕೆ ಜಾಗವನ್ನು ಮಂಜೂರು ಮಾಡಲಾಗಿದೆಯೇ;

ಆ) ಎಷ್ಟು ಎಕರೆ ಜಾಗವನ್ನು ಮಂಜೂರು ಮಾಡಲಾಗಿದೆ; ಯಾವಾಗ ಮಂಜೂರು ಮಾಡಲಾಗಿದೆ?

ಶ್ರೀ ಹೆಚ್.ಸಿ. ಶ್ರೀ ಕಂಠಯ್ಯ (ಕಂದಾಯ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಉತ್ತರಹಳ್ಳಿ ಕ್ಷೇತ್ರದ ಆಶ್ರಯ ಸಮಿತಿಯ ಅವ್ಯವಹಾರಗಳನ್ನು ಸಿ.ಓ.ಡಿ.ತನಿಖೆಗೆ ಒಪ್ಪಿಸುವುದು

866(1008) ಶ್ರೀ ಅಶೋಕ್ ಕುಮಾರ್ (ಉತ್ತರಹಳ್ಳಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರಹಳ್ಳಿ ಕ್ಷೇತ್ರಕ್ಕೆ ಸಂಬಂಧಪಟ್ಟ ಆಶ್ರಯ ಸಮಿತಿಯ ಅವ್ಯವಹಾರದ ಬಗ್ಗೆ ಸಿ.ಓ.ಡಿ. ತನಿಖೆ ವರದಿ ಸರ್ಕಾರಕ್ಕೆ ತಲುಪಿ ಎಷ್ಟು ದಿನಗಳಾಯಿತು ;

ಆ) ತಪ್ಪಿತಸ್ಥರ ಅಧಿಕಾರಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಳ್ಳಲು ತೀರ್ಮಾನಿಸಿದೆ.

ಇ) ಈ ಬಗ್ಗೆ ಕಾನೂನು ಕ್ರಮ ಕೈಗೊಳ್ಳಲು ವಿಳಂಬವಾಗುತ್ತಿರಲು ಕಾರಣವೇನು?